# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಉಪಲೋಕ್/ಬಿಡಿ–3660/2017/ಎಆರ್‌ಇ–6

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ:19/05/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ.ಎ.ನಾರಾಯಣಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಹಾಗೂ 2) ಶ್ರೀ.ಕೆ.ಸಿ.ಮಂಜುನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಾಡಿಗೋಳ್ ಗ್ರಾಮ ಪಂಚಾಯತ್, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ.ರಾಮಚಂದ್ರಪ್ಪ ಬಿನ್ ರಾಮಪ್ಪ, ಅಧ್ಯಕ್ಷರು, ಜೀ.ವಿ.ಕ. ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ), ಆಲಂಬಾಡಿ ಗ್ರಾಮ, ಬೂದಿಕೋಟೆ ಹೋಬಳಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, 1) ಶ್ರೀ.ಎ.ನಾರಾಯಣಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಹಾಗೂ 2) ಶ್ರೀ.ಕೆ.ಸಿ.ಮಂಜುನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಾಡಿಗೋಳ್ ಗ್ರಾಮ ಪಂಚಾಯತ್, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2) ದೂರುದಾರರು ತಮ್ಮ ದೂರಿನಲ್ಲಿ, ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು, ವ್ಯಾಪ್ತಿಯಲ್ಲಿರುವ ತಾಡಿಗೋಳ್ ಗ್ರಾಮ ಪಂಚಾಯತಿಯಲ್ಲಿ ಜಮಾಬಂದಿ ಮಾಡದೇ, ಸರ್ಕಾರದ ಹಣ ಖರ್ಚಾಗಿರುವ ಬಗ್ಗೆ ಸಾರ್ವಜನಿಕರಿಗೆ ತಿಳಿಸದೇ ಅನ್ಯಾಯ ಎಸಗಿದ್ದಾರೆಂದು ಆಪಾದಿಸಿದ್ದಾರೆ.

3) ದೂರಿನ ವಿಷಯದ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ದಿನಾಂಕ:08-04-2019ರ ಆಕ್ಷೇಪಣೆಯಲ್ಲಿ, ಶ್ರೀನಿವಾಸಪುರ ತಾಲ್ಲೂಕು, ತಾಡಿಗೋಳ್ ಗ್ರಾಮ ಪಂಚಾಯತಿಯಲ್ಲಿ ಜಮಾಬಂದಿ ನಡೆದಿರುವ ಬಗ್ಗೆ ವರದಿ ಸಲ್ಲಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿಲಾಗಿತ್ತು. ಅದರಂತೆ, ಸದರಿಯವರು 2015-16ನೇ ಸಾಲಿನ ಜಮಾಬಂದಿಯನ್ನು ಮಾಡಿರುವ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆಂದು, ಸದರಿ ವರದಿಯನ್ನು ಸಲ್ಲಿಸಲು ತಡವಾಗಿರುವುದರಿಂದ ಕ್ಷಮೆಯನ್ನು ಕೋರುತ್ತಾ ಈ ಕಛೇರಿಯ ಎಲ್ಲಾ ಸಿಬ್ಬಂದಿ ಹಾಗೂ ತಮ್ಮನ್ನು ಚುನಾವಣಾ ಕಾರ್ಯಕ್ಕಾಗಿ ನಿಯೋಜಿಸಿರುವುದರಿಂದ ತಡವಾಗಿರುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.

4) 2ನೇ ಎದುರುದಾರರು ದಿನಾಂಕ:21-10-2020ರ ತಮ್ಮ ಆಕ್ಷೇಪಣೆಯಲ್ಲಿ, ಸದರಿ ತಾಡಿಗೋಳ್ ಗ್ರಾಮ ಪಂಚಾಯತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿ: 01-09-2016 ರಂದು ಪ್ರಭಾರ ವಹಿಸಿಕೊಂಡಿರುತ್ತೇನೆ. ತದನಂತರ ದಿ:28-12-2017 ರಂದು ತಾನು ಜಮಾಬಂದಿ ಕಾರ್ಯಕ್ರಮವನ್ನು ನಡೆಸಿ ಎಲ್ಲಾ ವರದಿಗಳನ್ನು ತಮ್ಮ ಕಛೇರಿಗೆ ಸಲ್ಲಿಸಿರುತ್ತೇವೆ. ಆದ್ದರಿಂದ, ಈ ಪ್ರಕರಣದಿಂದ ತಮ್ಮನ್ನು ಮುಕ್ತಗೊಳಿಸಬೇಕೆಂದು ನಿವೇದಿಸಿಕೊಂಡಿದ್ದಾರೆ.

5) ದೂರಿನ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ಜಿಲ್ಲೆ ರವರಿಂದ ವರದಿಯನ್ನು ಕೇಳಲಾಗಿ, ಜಮಾಬಂದಿ ವರದಿಯನ್ನು ಸಲ್ಲಿಸಿರುತ್ತಾರೆ.

6) ಗ್ರಾಮ ಪಂಚಾಯತ್ ಜಮಾಬಂದಿಯ ಉದ್ದೇಶವು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಜನತೆಯ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಿಕೊಳ್ಳುವುದು ಮತ್ತು ಪ್ರೋತ್ಸಾಹಿಸುವುದು, ಪಾರದರ್ಶಕತೆ ಒದಗಿಸುವುದು ಮತ್ತು ನಾಗರೀಕರಿಗೆ ಮಾಹಿತಿ ದೊರಕುವಂತೆ ಮಾಡುವುದು, ಸಾರ್ವಜನಿಕರ ಕುಂದು-ಕೊರತೆ ಪರಿಹಾರ, ಜವಾಬ್ದಾರಿಯನ್ನು ಜಾರಿಗೊಳಿಸುವುದು ಮತ್ತು ಗ್ರಾಮ ಪಂಚಾಯತ್‌ಗಳ ಸ್ಪಂದನಶೀಲ ಆಡಳಿತವನ್ನು ಪ್ರೋತ್ಸಾಹಿಸುವ ಉದ್ದೇಶಕ್ಕೆ ಅವಶ್ಯಕವೆಂದು ಕಂಡುಬರುವ ಎಲ್ಲಾ ಅಗತ್ಯ ಕ್ರಮಗಳನ್ನು ಮಾಡುವುದಾಗಿದೆ. ಗ್ರಾಮ ಪಂಚಾಯತ್‌ಗಳು ವಾರ್ಷಿಕ ಜಮಾಬಂದಿ

ನಡೆಸಲು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004ನ್ನು ರಚಿಸಲಾಗಿದೆ. ಸದರಿ ನಿಯಮಗಳಲ್ಲಿ ಗ್ರಾಮ ಪಂಚಾಯತ್‌ನ ಜಮಾಬಂದಿಯ ಉದ್ದೇಶಗಳು, ಜಮಾಬಂದಿ ನಿರ್ವಹಣೆ ತಂಡದ ರಚನೆ, ಜಮಾಬಂದಿ ನಿರ್ವಹಣೆ ಕಾರ್ಯಕ್ರಮದ ತಯಾರಿ ಮತ್ತು ಸಂವಹನೆ, ಜಮಾಬಂದಿ ನಿರ್ವಹಣೆ, ಜಮಾಬಂದಿ ನಮೂನೆಗಳು ಮತ್ತು ವಹಿಗಳು, ಜಮಾಬಂದಿ ನಿರ್ವಹಣಾಧಿಕಾರಿಯ ಅಧಿಕಾರಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು, ಜಮಾಬಂದಿಯ ಸಮಯದಲ್ಲಿ ಗ್ರಾಮಸಭೆಯ ಸದಸ್ಯರಿಗೆ ಮಾಹಿತಿ, ಪಂಚಾಯತ್ ಜಮಾಬಂದಿ ವರದಿ ಮತ್ತು ಜಮಾಬಂದಿ ನಿರ್ವಹಣೆ ನಡೆಸಲು ಹಿರಿಯ ಅಧಿಕಾರಿಗಳ ಕರ್ತವ್ಯದ ಬಗ್ಗೆ ಸವಿವರವಾಗಿ ತಿಳಿಸಿದೆ;

7) ಆದರೆ, ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಸಾರ್ವಜನಿಕರಿಗೆ ತಿಳಿಸದೇ ಜಮಾಬಂದಿ ಕಾರ್ಯಕ್ರಮ ನಡೆಸುತ್ತಿರುವುದು ಮತ್ತು ಜಮಾಬಂದಿ ವರದಿಯ ಮೇಲೆ ಕ್ರಮ ಕೈಗೊಳ್ಳದಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದ ಹಿನ್ನಲೆಯಲ್ಲಿ ಸದರಿ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಸುತ್ತೋಲೆ ಸಂಖ್ಯೆ:ಗ್ರಾಅಪ 851 ಗ್ರಾಪಂಅ 2017, ದಿನಾಂಕ:31/07/2017ನ್ನು ಕರ್ನಾಟಕ ಸರ್ಕಾರವು ಹೊರಡಿಸಿದೆ. ವಾರ್ಷಿಕ ಜಮಾಬಂದಿ ಕಾರ್ಯಕ್ರಮವನ್ನು ಕಡ್ಡಾಯವಾಗಿ ನಡೆಸಲು ಈ ಕೆಳಕಂಡ ಅಂಶಾವಾರಿನಂತೆ, ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದೆ –

(ಅ) ತಾಲ್ಲೂಕಿನೊಳಗೆ ಗ್ರಾಮ ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ನಿರ್ವಹಿಸಲು ಕಾರ್ಯನಿರ್ವಾಹಕ ಅಧಿಕಾರಿಯು ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡಗಳನ್ನು ರಚಿಸತಕ್ಕದ್ದು.

(ಆ) ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ಜಮಾಬಂದಿ ನಡೆಸಲು ಪ್ರತಿ ವರ್ಷದ ಆಗಸ್ಟ್ 16ನೇ ದಿನಾಂಕದಿಂದ ಸೆಪ್ಟೆಂಬರ್ 15ನೇ ದಿನಾಂಕದೊಳಗಿನ ಅವಧಿಯಲ್ಲಿ ಪಂಚಾಯತ್ ಜಮಾಬಂದಿಯು ಮುಕ್ತಾಯಗೊಳ್ಳುವಂತೆ ವೇಳಾಪಟ್ಟಿಯನ್ನು ರಚಿಸಿ, ಈ ವೇಳಾಪಟ್ಟಿಗೆ

ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ 30 ದಿನಗಳ ಮುಂಚಿತವಾಗಿ ಸಂವಹನಗೊಳ್ಳತಕ್ಕದ್ದು.

(ಇ) ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ಸಾರ್ವಜನಿಕವಾಗಿ ನಡೆಸಲು ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಎಲ್ಲಾ ವ್ಯವಸ್ಥೆಯನ್ನು ಮಾಡಿರತಕ್ಕದ್ದು.

(ಈ) ಪಂಚಾಯತ್ ಜಮಾಬಂದಿ ವೇಳಾಪಟ್ಟಿಯು ಸ್ಥಳೀಯ ಪತ್ರಿಕೆಗಳು, ಜಿಲ್ಲೆಯ ವಾರ ಪತ್ರಿಕೆಗಳಲ್ಲಿ ಪ್ರಕಟಗೊಳ್ಳತಕ್ಕದ್ದು ಮತ್ತು ಕರಪತ್ರಗಳನ್ನು ಪಂಚಾಯತ್ ಪ್ರದೇಶಗಳಲ್ಲಿ ವಿತರಿಸತಕ್ಕದ್ದು. ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರವೂ ನೀಡತಕ್ಕದ್ದು.

(ಉ) ಪಂಚಾಯತ್ ಜಮಾಬಂದಿ ನಿರ್ವಹಣೆಯು ನಿಗದಿತ ದಿನ ಮತ್ತು ಸಮಯದಲ್ಲಿ ಸಾರ್ವಜನಿಕವಾಗಿ 2 ಅವಧಿಯಲ್ಲಿ ನಡೆಯತಕ್ಕದ್ದು. ಪೂರ್ವಾಹ್ನದ ಅವಧಿಯಲ್ಲಿ ಅಧಿಕಾರಿಯು ಗ್ರಾಮ ಪಂಚಾಯತಿಯ ಎಲ್ಲಾ ಲೆಕ್ಕಗಳು ಮತ್ತು ವಹಿಗಳನ್ನು ತನಿಖೆ ಮಾಡತಕ್ಕದ್ದು ಹಾಗೂ ಅಪರಾಹ್ನದ ಅವಧಿಯಲ್ಲಿ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿ ಮತ್ತು ಆತನ ತಂಡವು ಆಯ್ದ ಕಾಮಗಾರಿಗಳ ತನಿಖೆ ನಡೆಸತಕ್ಕದ್ದು.

(ಊ) ಪಂಚಾಯತ್ ಜಮಾಬಂದಿ ನಿರ್ವಹಿಸಿದ ನಂತರ ಪಂಚಾಯತ್ ಜಮಾಬಂದಿ ನಿರ್ವಹಣಾ ದುರುಪಯೋಗ, ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದಂತೆ ಯಾವುದೇ ಗುಣಾತ್ಮಕ ಗ್ರಾಮ ಪಂಚಾಯತಿ ಕಾರ್ಯದ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನು ಹೊಂದಿರುವ ವಿವರವಾದ ವರದಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಆತ ಪಂಚಾಯತ್ ಜಮಾಬಂದಿಯ ಕಾರ್ಯ ಸಾರಾಂಶವನ್ನು ಸಿದ್ಧಪಡಿಸತಕ್ಕದ್ದು.

(ಋ) ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಮುಂದಿನ ಗ್ರಾಮ ಸಭೆಯಲ್ಲಿ ಜಮಾಬಂದಿ ಅಧಿಕಾರಿಯ ವರದಿಯನ್ನು ಮಂಡಿಸಲು ಕ್ರಮ ತೆಗೆದುಕೊಳ್ಳುವುದು. ಜಮಾಬಂದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರ ಪತ್ರಿಕೆಯಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವುದು.

(ಎ) ವರದಿಯಲ್ಲಿ ಮಾಡಲಾದ ಟಿಪ್ಪಣಿಗಳ ಬಗ್ಗೆ 15 ದಿನಗಳೊಳಗೆ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯು ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಮುಂದಿನ ಕ್ರಮ ಕೈಗೊಳ್ಳಲು ಸೂಚನೆ ನೀಡತಕ್ಕದ್ದು.

(ಏ) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯು ತಾಲ್ಲೂಕ್ ಪಂಚಾಯತಿಯ ಮುಂದಿನ ಸಭೆಯಲ್ಲಿ ಜಮಾಬಂದಿ ವರದಿಗಳನ್ನು ಮಂಡಿಸುವುದು.

(ಐ) ಪಂಚಾಯತ್ ಜಮಾಬಂದಿ ವರದಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯು ಕರೆದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಕರೆದ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಮೊದಲ ವಿಷಯವಾಗಿ ಪರಿಶೀಲಿಸತಕ್ಕದ್ದು ಮತ್ತು ಪಂಚಾಯತ್ ಜಮಾಬಂದಿ ವರದಿಯ ಅನುಸರಣೆ ನಡೆಸದಿರುವ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು ಮತ್ತು ಶಿಸ್ತಿನ ಕ್ರಮ ಜರುಗಿಸತಕ್ಕದ್ದು.

(ಒ) ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉಪ ಕಾರ್ಯದರ್ಶಿ, ಸಹಾಯಕ ಕಾರ್ಯದರ್ಶಿ ರವರು ಪಂಚಾಯತ್ ಜಮಾಬಂದಿಯನ್ನು ತಾಲ್ಲೂಕಿನಲ್ಲಿ ಕನಿಷ್ಠ 2 ಗ್ರಾಮ ಪಂಚಾಯತ್‌ಗಳಲ್ಲಿ ನಡೆಸತಕ್ಕದ್ದು.

(ಓ) ಜಮಾಬಂದಿ ನಡೆಸಿದ ದಿನಾಂಕ ಹಾಗೂ ವಿವರಗಳನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳು ಪಂಚತಂತ್ರದಲ್ಲಿ ತಪ್ಪದೆ ಅಳವಡಿಸುವುದು.

8) ಮೇಲೆ ಹೇಳಿದ ಸುತ್ತೋಲೆಯಲ್ಲಿ ಸೂಚಿಸಿದನ್ವಯ ಅಂಶ-1ರನ್ವಯ ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡಗಳನ್ನು ರಚಿಸಲು ಕಾರ್ಯನಿರ್ವಾಹಕ ಅಧಿಕಾರಿಯು ಕ್ರಮ ತೆಗೆದುಕೊಳ್ಳತಕ್ಕದ್ದು, ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಪ್ರತಿ ವರ್ಷ ಆಗಸ್ಟ್ 16ನೇ ದಿನಾಂಕದಿಂದ ಸೆಪ್ಟೆಂಬರ್ 15 ದಿನಾಂಕದ ಅವಧಿಯಲ್ಲಿ ಜಮಾಬಂದಿಯು ಮುಕ್ತಾಯಗೊಳ್ಳುವಂತೆ ವೇಳಾ ಪಟ್ಟಿಯನ್ನು ಕಾರ್ಯನಿರ್ವಾಹಕ ಅಧಿಕಾರಿಯು ರಚಿಸತಕ್ಕದ್ದು. ಅಂಶ-4ರನ್ವಯ ಪಂಚಾಯತ್ ಜಮಾಬಂದಿ ವೇಳಾ ಪಟ್ಟಿಯು ಸ್ಥಳೀಯ ಪತ್ರಿಕೆಗಳಲ್ಲಿ, ಜಿಲ್ಲಾ ವಾರಪತ್ರಿಕೆಗಳಲ್ಲಿ ಪ್ರಕಟಗೊಳ್ಳತಕ್ಕದಲ್ಲದೇ, ಕರ ಪತ್ರಗಳನ್ನು

ಗ್ರಾಮ ಪಂಚಾಯತ್ ಪ್ರದೇಶಗಳಲ್ಲಿ ವಿತರಿಸಬೇಕು ಮತ್ತು ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರವು ನೀಡತಕ್ಕದ್ದು. ಅಂಶ-8ರನ್ವಯ ಜಮಾಬಂದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರಪತ್ರಿಕೆಯಲ್ಲಿ ಪ್ರಕಟಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ವ್ಯವಸ್ಥೆ ಮಾಡತಕ್ಕದ್ದು. ಪಂಚಾಯತ್ ಜಮಾಬಂದಿ ಅನುಸರಣೆ ನಡೆಸದಿರುವ ವಿಷಯವನ್ನು ಸರ್ಕಾರವು ಗಂಭೀರವಾಗಿ ತೆಗೆದುಕೊಂಡಿದ್ದು, ವರದಿಯ ಅನುಸರಣೆ ನಡೆಸದಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು, ಸದರಿ ಸುತ್ತೋಲೆಯಲ್ಲಿ ಸೂಚಿಸಿದೆ.

9) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ;

ಅ) ಸದರಿ ದೂರಿನಲ್ಲಿ ಶ್ರೀನಿವಾಸಪುರ ತಾಲ್ಲೂಕ್, ತಾಡಿಗೋಳ್ ಗ್ರಾಮ ಪಂಚಾಯತ್‌ನ 2015-16ನೇ ಸಾಲಿನ ಮತ್ತು 2016-17ನೇ ಸಾಲಿನ ಜಮಾಬಂದಿ ದಿನಾಂಕ:28-12-2017 ರಂದು ನಡೆದಿದೆಯೆಂದು 2ನೇ ಎದುರುದಾರರ ಆಕ್ಷೇಪಣೆಯಲ್ಲಿ ಕಂಡುಬರುತ್ತದೆ.

ಆ) ಮೇಲೆ ಹೇಳಿದ ಸುತ್ತೋಲೆಯನ್ವಯ 2015-16ನೇ ಸಾಲಿನ ಮತ್ತು 2016-17ನೇ ಸಾಲಿನ ಜಮಾಬಂದಿಯನ್ನು ಕ್ರಮವಾಗಿ ದಿನಾಂಕ:16/08/2016 ರಿಂದ 15/09/2016 ಮತ್ತು ದಿನಾಂಕ:16/08/2017 ರಿಂದ 15/09/2017 ರೊಳಗೆ ಪೂರ್ಣಗೊಳಿಸಬೇಕಿತ್ತು, ಆದರೆ, ತಾಡಿಗೋಳ್ ಗ್ರಾಮ ಪಂಚಾಯತ್‌ನಲ್ಲಿ 2015-16ನೇ ಸಾಲಿನ ಮತ್ತು 2016-17ನೇ ಸಾಲಿನ ಜಮಾಬಂಧಿಯನ್ನು ವಿಳಂಬವಾಗಿ ದಿನಾಂಕ:28-12-2017 ರಂದು ನಡೆಸಿದ್ದಾರೆ.

ಇ) ಸರ್ಕಾರದ ಸುತ್ತೋಲೆ ಅಂಶ-2ರನ್ವಯ ಜಮಾಬಂದಿ ವೇಳಾಪಟ್ಟಿಯನ್ನು 30 ದಿನಗಳ ಮುಂಚಿತವಾಗಿ ಗ್ರಾಮ ಪಂಚಾಯತ್‌ಗೆ ಸಂವಹನ ಮಾಡಿಲ್ಲ;

ಈ) ಸರ್ಕಾರದ ಸುತ್ತೋಲೆ ಅಂಶ-11 ರನ್ವಯ ಪಂಚಾಯತ್‌ನ ಜಮಾಬಂದಿ ವರದಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆಯಲ್ಲಿ ಮೊದಲ ವಿಷಯವಾಗಿ ಕಾರ್ಯನಿರ್ವಾಹಕ ಅಧಿಕಾರಿಯು ಪರಿಶೀಲಿಸಿಲ್ಲ;

ಉ) ಸರ್ಕಾರದ ಸುತ್ತೋಲೆ ಅಂಶ-4ರನ್ವಯ ಸದರಿ ಪಂಚಾಯತ್‌ನ ಜಮಾಬಂದಿ ವೇಳಾಪಟ್ಟಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸ್ಥಳೀಯ ಪತ್ರಿಕೆಗಳಲ್ಲಿ, ಜಿಲ್ಲೆಯ ವಾರ ಪತ್ರಿಕೆಗಳಲ್ಲಿ ಪ್ರಕಟಗೊಳಿಸಿಲ್ಲ ಮತ್ತು ಪಂಚಾಯತ್ ಪ್ರದೇಶಗಳಲ್ಲಿ ಕರ ಪತ್ರಗಳನ್ನು ವಿತರಿಸಿದ ಬಗ್ಗೆ ಹಾಗೂ ಪ್ರಚಾರವನ್ನು ದೃಶ್ಯ ಮಾಧ್ಯಮದ ಮುಖಾಂತರ ನೀಡಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ;

ಊ) ಸರ್ಕಾರದ ಸುತ್ತೋಲೆ ಅಂಶ-8 ರನ್ವಯ ಜಮಾಬಂದಿ ವರದಿಯನ್ನು ಅದೇ ದಿನದ ಪಂಚಾಯತ್ ಸಭೆಯಲ್ಲಿ ಮಂಡಿಸಿದಂತೆ ನಡವಳಿಯನ್ನು ದಾಖಲಿಸಿರುವುದು ಕಂಡುಬಂದಿದೆ;

ಋ) ಜಮಾಬಂದಿಯ ಮುಖ್ಯಾಂಶಗಳನ್ನು ಜಿಲ್ಲಾ ವಾರ ಪತ್ರಿಕೆಗಳಲ್ಲಿ ಪ್ರಕಟಿಸಿರುವ ಬಗ್ಗೆ ದಾಖಲೆಗಳಿಲ್ಲ;

10) 1ನೇ ಎದುರುದಾರರು ದಿನಾಂಕ:09/11/2016 ರಿಂದ ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್‌ನಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, 2ನೇ ಎದುರುದಾರರು ದಿನಾಂಕ:01/09/2016 ರಂದು ತಾಡಿಗೋಳ್ ಗ್ರಾಮ ಪಂಚಾಯತ್ ಕಛೇರಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಕರ್ತವ್ಯ ನಿರ್ವಹಿಸಿರುವುದು ಕಂಡುಬಂದಿದೆ;

11) ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕ್ ಪಂಚಾಯತ್ ವ್ಯಾಪ್ತಿಯ ತಾಡಿಗೋಳ್ ಗ್ರಾಮ ಪಂಚಾಯತಿಯಲ್ಲಿ ಜಮಾಬಂದಿಯನ್ನು ವಿಳಂಬವಾಗಿ ಮಾಡಲು 1 ಮತ್ತು 2ನೇ ಎದುರುದಾರರು ತಮ್ಮ ತಮ್ಮ ಆಕ್ಷೇಪಣೆಗಳಲ್ಲಿ ನೀಡಿರುವ ಸ್ಪಷ್ಟನೆಯನ್ನು ಈ ಹಂತದಲ್ಲಿ ಒಪ್ಪಲಾಗುವುದಿಲ್ಲ.

12) ಕಾರಣ, ದೂರಿನ ಎದುರುದಾರರುಗಳು ಮೇಲೆ ಹೇಳಿದ ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ರಾಜ್ ಜಮಾಬಂದಿ ನಿರ್ವಹಣೆ) ನಿಯಮಗಳು, 2004 ಮತ್ತು ಕರ್ನಾಟಕ ಸರ್ಕಾರದ ಸುತ್ತೋಲೆಗಳಲ್ಲಿನ ಅಂಶಗಳನ್ನು ಉಲ್ಲಂಘಿಸಿದ್ದಾರೆಂದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬಂದಿದೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ 1 ಮತ್ತು 2ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 1ನೇ ಎದುರುದಾರ ಶ್ರೀ.ಎ.ನಾರಾಯಣಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಹಾಗೂ 2ನೇ ಎದುರುದಾರ ಶ್ರೀ.ಕೆ.ಸಿ.ಮಂಜುನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ತಾಡಿಗೋಳ್ ಗ್ರಾಮ ಪಂಚಾಯತ್, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

13) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ನ್ಯಾಯಮೂರ್ತಿ ಕೆ.ಎನ್.ಪಣೀಂದ್ರ]**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**